# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: **278**
ಸದಸ್ಯರ ಹೆಸರು **ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)**
ಉತ್ತರಿಸಬೇಕಾದ ದಿನಾಂಕ **11-12-2024**
ಉತ್ತರಿಸುವ ಸಚಿವರು **ಲೋಕೋಪಯೋಗಿ ಸಚಿವರು**

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಭೂಸ್ವಾಧೀನ ಮಾಡಿಕೊಳ್ಳದೇ ಹಾರೋಹಳ್ಳಿ ಸಮೀಪ ಹೊನ್ನಮ್ಮನಕಟ್ಟೆಯಲ್ಲಿ ದಕ್ಷಿಣ ಪಿನಾಕಿನಿ ನದಿಗೆ ಸೇತುವೆ ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೇಯೇ: ಸೇತುವೆಯನ್ನು ನಿರ್ಮಿಸಿ ಅಪ್ರೋಚ್ ರಸ್ತೆಗಳು ಇಲ್ಲದೇ ಇರುವ ಕಾರಣ ಈ ಸೇತುವೆಯು ಸಾರ್ವಜನಿಕರ ಉಪಯೋಗಕ್ಕೆ ಬಾರದೇ ಇರುವ ಕುರಿತು ಸರ್ಕಾರದ ನಿಲುವೇನು; ದೋಷಪೂರಿತ ಅಂದಾಜು ತಯಾರಿಸಿದ ಎಇಇ ಮತ್ತು ಇಇ ಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು) | ಬೆಂಗಳೂರು ಗ್ರಾಮಾಂತರ ಜಿಲ್ಲೆ ಹೊಸಕೋಟೆ ತಾಲ್ಲೂಕು, ರಾಷ್ಟ್ರೀಯ ಹೆದ್ದಾರಿ 207 ರಿಂದ ಮುತ್ಕೂರು, ದಾಮೋದರನಗರ, ಹಾರೋಹಳ್ಳಿ, ಅಜಗೊಂಡನಹಳ್ಳಿ ಮೂಲಕ ರಾಜ್ಯ ಹೆದ್ದಾರಿ-35 ಅನ್ನು ಸೇರುವ ಕೂಡು ರಸ್ತೆಯ ಹೊನ್ನಮ್ಮನಕಟ್ಟೆ ಹತ್ತಿರ (ಹಾರೋಹಳ್ಳಿ ಬಳಿ) ದಕ್ಷಿಣ ಪಿನಾಕಿನಿ ನದಿಗೆ ಅಡ್ಡಲಾಗಿ ಸೇತುವೆ ನಿರ್ಮಾಣ ಕಾಮಗಾರಿಯು 2015-16ನೇ ಸಾಲಿನಲ್ಲಿ ಅಂದಾಜು ಮೊತ್ತ ರೂ.400.00 ಲಕ್ಷಗಳಿಗೆ ಕೈಗೊಳ್ಳಲು ಅನುದಾನ ಒದಗಿಸಲಾಗಿರುತ್ತದೆ. (RWD)<br><br>ಸದರಿ ಕಾಮಗಾರಿಯ ಯೋಜನೆಯನ್ನು ಸಿದ್ದಪಡಿಸುವ ಸಮಯದಲ್ಲಿ ಸ್ಥಳವನ್ನು ಉಪವಿಭಾಗಾಧಿಕಾರಿಗಳು ದೊಡ್ಡಬಳ್ಳಾಪುರ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಹೊಸಕೋಟೆ ರವರು ದಿನಾಂಕ: 24.11.2015 ರಂದು ಸ್ಥಳ ಪರಿವೀಕ್ಷಣೆ ಕೈಗೊಂಡು ಈ ಯೋಜನೆಗೆ ಅವಶ್ಯವಿರುವ 1 ಎಕರೆ 32.5 ಗುಂಟೆಗಳ ಭೂಮಿ ಸ್ವಾಧೀನ ಪಡಿಸಿಕೊಳ್ಳುವುದು ಕಂಡು ಬಂದಿದ್ದು, ಸದರಿ ಭೂಮಿಗೆ ಬದಲಾಗಿ ಪರ್ಯಾಯ ಭೂಮಿಯನ್ನು ಜಮೀನಿನ ಮಾಲೀಕರಿಗೆ ನೀಡುವಂತೆ ನಿರ್ಧರಿಸಲಾಗಿರುತ್ತದೆ.<br><br>ಅದರಂತೆ, ತಹಶೀಲ್ದಾರ್, ಹೊಸಕೋಟೆ ತಾಲ್ಲೂಕು ರವರು ಸದರಿ ಗ್ರಾಮದ ಸರ್ವೆ ನಂ.85 ರಲ್ಲಿ 1 ಎಕರೆ 32.08 ಗುಂಟೆಗಳನ್ನು ಪರ್ಯಾಯವಾಗಿ ಜಮೀನಿನ ಮಾಲೀಕರಿಗೆ ಮಂಜೂರು ಮಾಡುವುದಾಗಿ ತಿಳಿಸಿದ್ದರ ಮೇರೆಗೆ ಮಾಲೀಕರು ಒಪ್ಪಿಗೆ ನೀಡಿ, ದಿನಾಂಕ:13.04.2016 ರಂದು ಒಪ್ಪಿಗೆ ಪತ್ರ ನೀಡಿರುತ್ತಾರೆ (ಅನುಬಂಧ-1).<br><br>ನಂತರ ಸದರಿ ಕಾಮಗಾರಿಯ ವಿಸ್ತೃತ ಯೋಜನೆ ಸಿದ್ದಪಡಿಸಿಕೊಂಡು ದಿ:19.07.2016ರಲ್ಲಿ ತಾಂತ್ರಿಕ ಮಂಜೂರಾತಿಯನ್ನು ನೀಡಿ, ದಿನಾಂಕ:27.09.2016 ರಂದು ಕಾಮಗಾರಿಯ ಟೆಂಡರ್‌ನ್ನು ಕರೆದು, ನಿಯಾಮನುಸಾರ ಗುತ್ತಿಗೆದಾರರಾದ ಮೆ: ಬಿ.ಎನ್ ಎನ್. ಕನ್‌ಸ್ಟ್ರಕ್ಷನ್ ಪ್ರೈವೆಟ್ ಲಿಮಿಟೆಡ್ ರವರಿಗೆ ಟೆಂಡರ್ ನೀಡಿ ದಿನಾಂಕ:08.03.2017 ರಲ್ಲಿ ಕರಾರು ಮಾಡಿಕೊಂಡು ಅದರನ್ವಯ ಸದರಿ ಸೇತುವೆ ಕಾಮಗಾರಿಯನ್ನು ದಿ:12.06.2018 ರಂದು ಪೂರ್ಣಗೊಳಿಸಬೇಕಾಗಿರುತ್ತದೆ. ಅದರಂತೆ ಕಾಮಗಾರಿಯನ್ನು ಪ್ರಾರಂಭಿಸಿ ದಿನಾಂಕ: 17.02.2019 ರವರೆಗೆ ಸೇತುವೆ ಭಾಗವನ್ನು ಹಾಗೂ ಲಭ್ಯವಿರುವ ಸ್ಥಳದಲ್ಲಿ ಭಾಗಶಃ ಅಪ್ರೋಚ್ ರಸ್ತೆಯನ್ನು ಪೂರ್ಣಗೊಳಿಸಿ ರೈತರ ಓಡಾಟಕ್ಕೆ ಹಾಗೂ ವಾಹನಗಳ ಸಂಚಾರಕ್ಕೆ ಹಾಲಿ ಇದ್ದ ಬಂಡಿ ದಾರಿ ಉಪಯೋಗಿಸಿ ಸೇತುವೆಯ ಮೂಲಕ ಸಂಚಾರ ಕಲ್ಪಿಸಲಾಗಿರುತ್ತದೆ. |

| | | |
|---|---|---|
| | | ಮುಂದುವರೆದು, ತಹಶೀಲ್ದಾರ್, ಹೊಸಕೋಟೆ ತಾಲ್ಲೂಕು ರವರು ದಿನಾಂಕ: 12.01.2017 ರಂದು ಹಾರೋಹಳ್ಳಿ ಗ್ರಾಮದ ಸರ್ವೇ ನಂ.85 ರಲ್ಲಿ ಈ ಹಿಂದೆ ಹೇಳಿದ 1 ಎಕರೆ 32.08 ಗುಂಟೆ ಜಮೀನಿನ ಮೇಲೆ ಸಿವಿಲ್ ದಾವೆ ಇರುವುದರಿಂದ ಬದಲಿಗೆ ಬೋಧನಹೊಸಹಳ್ಳಿ ಗ್ರಾಮದ ಸರ್ವೇ ನಂ.128 ರಲ್ಲಿ 1 ಎಕರೆ 32.5 ಗುಂಟೆ ಪರ್ಯಾಯ ಜಮೀನು ನೀಡಲು ನಿರ್ಧರಿಸಿರುತ್ತಾರೆ (ಅನುಬಂಧ-2). ಈ ಪರ್ಯಾಯ ಭೂಮಿ (ಸರ್ವೇ ನಂ.128) ಕೃಷಿಗೆ ಯೋಗ್ಯವಲ್ಲ ಎಂದು ತಿಳಿಸಿದ ಜಮೀನಿನ ಮಾಲೀಕರು ಈ ಪ್ರಸ್ತಾಪವನ್ನು ನಿರಾಕರಿಸಿರುತ್ತಾರೆ.<br><br>ಈ ಹಿನ್ನಲೆಯಲ್ಲಿ ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಅವಶ್ಯವಿರುವ 29 ಗುಂಟೆಗಳ ಭೂಮಿಯನ್ನು ಭೂಸ್ವಾಧೀನ ಪಡೆಸಿಕೊಳ್ಳಲು ಉಪವಿಭಾಗಾಧಿಕಾರಿಗಳು ದೊಡ್ಡಬಳ್ಳಾಪುರ ರವರು ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿ, ಭೂಸ್ವಾಧೀನ ವೆಚ್ಚ ರೂ.125.00 ಲಕ್ಷಗಳ ಅಂದಾಜು ಪಟ್ಟಿಗೆ ಸರ್ಕಾರದಿಂದ ಅನುಮೋದನೆ ಪಡೆದು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ ರವರು ದಿನಾಂಕ:22.08.2019 ರಂದು ಪರಿಹಾರ ಮೊತ್ತವಾದ ರೂ.125.00 ಲಕ್ಷಗಳನ್ನು ಪಾವತಿಸಿ ಅಗತ್ಯವಿರುವ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಕೋರಿರುತ್ತಾರೆ.<br><br>ತದನಂತರ ಭೂಮಿಯನ್ನು ಸ್ವಾಧೀನ ಪಡೆದುಕೊಂಡು ಅಪ್ರೋಚ್ ರಸ್ತೆಯನ್ನು ಅಗಲೀಕರಣಗೊಳಿಸಿ ರಸ್ತೆಯನ್ನು ಅಭಿವೃದ್ಧಿ ಪಡಿಸಿ ದಿನಾಂಕ:30.11.2023 ರಂದು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.<br><br>ಮೇಲಿನ ಅಂಶಗಳ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಪಟ್ಟಿ ತಯಾರಿಸಿದ ಪ್ರಕ್ರಿಯೆಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಕಾರ್ಯಪಾಲಕ ಇಂಜಿನಿಯರ್ ರವರುಗಳ ಯಾವುದೇ ಕರ್ತವ್ಯ ಲೋಪ ಇರುವುದಿಲ್ಲ. |
| ಆ) | ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಕುಮಟಗಿಯಿಂದ ಉಕ್ಕಲಿವರೆಗೆ ರಸ್ತೆ ನಿರ್ಮಿಸುವಾಗ ಭೂ ಸ್ವಾಧೀನ ಮಾಡಿಕೊಳ್ಳದೆ ಡಾನ್ ನದಿಯ ಮೇಲೆ ನಿರ್ಮಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಸೇತುವೆಯನ್ನು ನಿರ್ಮಿಸಿ ಅಪ್ರೋಚ್ ರಸ್ತೆಗಳು ಇಲ್ಲದೆ ಇರುವ ಕಾರಣ ಈ ಸೇತುವೆಯು ಸಾರ್ವಜನಿಕರ ಉಪಯೋಗಕ್ಕೆ ಬಾರದೇ ಇರುವ ಕುರಿತು ಸರ್ಕಾರದ ನಿಲುವೇನು; | ರಾಷ್ಟ್ರೀಯ ಹೆದ್ದಾರಿ, ಉತ್ತರ ವಲಯ ಬೆಳಗಾವಿ ವ್ಯಾಪ್ತಿಯಡಿ ಬರುವ ರಾ.ಹೆ. ವಿಭಾಗ, ವಿಜಯಪುರಕ್ಕೆ ಸಂಬಂಧಿಸಿದಂತೆ : ವಿಜಯಪುರ ಜಿಲ್ಲೆ ಬಸವನ ಬಾಗೇವಾಡಿ ತಾಲ್ಲೂಕಿನ ಕುಮಟಗಿಯಿಂದ ಉಕ್ಕಲಿವರೆಗೆ ರಸ್ತೆ ಕಾಮಗಾರಿ (ಸೇತುವೆ) ನಿರ್ಮಾಣ ಕಾಮಗಾರಿಯನ್ನು ಕೇಂದ್ರ ರಸ್ತೆ ನಿಧಿ-ಯೋಜನೆಯಡಿ ಕೈಗೊಳ್ಳಲಾಗಿರುತ್ತದೆ. ಆದರೆ ಕೇಂದ್ರ ರಸ್ತೆ ನಿಧಿಯೋಜನೆಯ ಮಾರ್ಗಸೂಚಿಯಂತೆ ಭೂ-ಸ್ವಾಧೀನ ಕಾರ್ಯ ಕೈಗೊಳ್ಳಲು ಅವಕಾಶವಿರುವುದಿಲ್ಲ. ಈ ಹಿನ್ನಲೆಯಲ್ಲಿ ಭೂಸ್ವಾಧೀನ ಕಾರ್ಯವನ್ನು ಕೈಗೊಂಡಿರುವುದಿಲ್ಲ.<br><br>ಮುಂದುವರೆದು, ಸದರಿ ಕಾಮಗಾರಿಯನ್ನು ರಸ್ತೆ ಅಂಚಿನಲ್ಲಿರುವ ಕೆಲವೊಂದು ಗ್ರಾಮಸ್ಥರು ಅಡಚಣೆ ಮಾಡಿರುವುದರಿಂದ ಸ್ಥಗಿತಗೊಂಡಿದ್ದು ಹಾಗೂ ಗುತ್ತಿಗೆದಾರರು ನಿಗದಿತ ಸಮಯದಲ್ಲಿ ಮಾಡಿರುವ ಅಂಶಗಳಿಗೆ ಹಣ ಪಾವತಿ ಆಗದೇ ಇರುವುದರಿಂದ ಮತ್ತು ಕೋವಿಡ್-ಸಾಂಕ್ರಾಮಿಕ ರೋಗದ ಅವಧಿಯಲ್ಲಿ ಕಾಮಗಾರಿ ಸ್ಥಗಿತಗೊಂಡಿದ್ದು, ಪರಿಣಿತ ಸಿಬ್ಬಂದಿ ಲಭ್ಯವಾಗದೇ ಇರುವುದರಿಂದ ಗುತ್ತಿಗೆದಾರರು ತಮ್ಮ ಗುತ್ತಿಗೆಯನ್ನು ಸ್ವತ್ತುಮರುಸ್ವಾಧೀನ |

| | | |
|---|---|---|
| | | (Foreclosure) ಮಾಡಿಕೊಂಡಿರುವರು. ಸದ್ಯದ ಹಂತದಲ್ಲಿ ಜಮೀನಿನ ಮಾಲಿಕರೊಂದಿಗೆ ಗ್ರಾಮದ ಮುಖ್ಯಸ್ಥರು ಚರ್ಚಿಸಿ ಕಾಮಗಾರಿಯನ್ನು ಕೈಗೊಳ್ಳಲು ಅನುವು ಮಾಡಿಕೊಟ್ಟಿರುವುದರಿಂದ, ಬಾಕಿ ಉಳಿದ ಕಾಮಗಾರಿಗೆ ಸರ್ಕಾರದಿಂದ ಅನುಮೋದನೆ ಪಡೆದು ಮರು ಗುತ್ತಿಗೆ ಆಧಾರದ ಮೇಲೆ ಸೇತುವೆ ಹಾಗೂ ಅಪ್ರೋಚ್ ರಸ್ತೆಗಳ ಕಾಮಗಾರಿ ಪ್ರಾರಂಭಿಸಲಾಗಿರುತ್ತದೆ. ಕಾಮಗಾರಿಯು ಕೂಡ ಪ್ರಗತಿಯಲ್ಲಿರುತ್ತದೆ. |
| ಇ) | ಈ ದೋಷಪೂರಿತ ಅಂದಾಜಿನಿಂದ ಸುಮಾರು 10 ಕೋಟಿಗಳಷ್ಟು ಮೊತ್ತ ನಷ್ಟವಾಗಿದ್ದು, ದೋಷಪೂರಿತ ಅಂದಾಜು ತಯಾರಿಸಿದ ಎಇಇ ಮತ್ತು ಇಇ ಗಳನ್ನು ಅಮಾನತ್ತು ಮಾಡಲಾಗಿದೆಯೇ; ಇವರ ಮೇಲೆ ಯಾವ ಯಾವ ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು) | ಮೇಲೆ (ಅ) ಪ್ರಶ್ನೆಗೆ ಉತ್ತರಿಸಿರುವ ಅಂಶಗಳ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಪಟ್ಟಿ ತಯಾರಿಸಿದ ಪ್ರಕ್ರಿಯೆಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಕಾರ್ಯಪಾಲಕ ಇಂಜಿನಿಯರ್ ರವರುಗಳ ಯಾವುದೇ ಕರ್ತವ್ಯ ಲೋಪ ಇರುವುದಿಲ್ಲ.<br><br>ರಾಷ್ಟ್ರೀಯ ಹೆದ್ದಾರಿ, ಉತ್ತರ ವಲಯ ಬೆಳಗಾವಿ ವ್ಯಾಪ್ತಿಯಡಿ ಬರುವ ರಾ.ಹೆ. ವಿಭಾಗ, ವಿಜಯಪುರಕ್ಕೆ ಸಂಬಂಧಿಸಿದಂತೆ : ಅಂದಾಜು ಪತ್ರಿಕೆಯು ಸ್ಥಳದ ಅನುಗುಣವಾಗಿ ಕಾಮಗಾರಿ ಅನುಮೋದನೆಗೊಂಡಂತೆ ಹಾಗೂ ನುರಿತ ಸಲಹೆಗಾರರೊಂದಿಗೆ (DPR Consultant) ಚರ್ಚಿಸಿ ಹಾಗೂ ಗ್ರಾಮಸ್ಥರಿಗೆ ಅನುಕೂಲವಾಗುವಂತೆ ಅಂದಾಜು ಪತ್ರಿಕೆಯನ್ನು ತಯಾರಿಸಲಾಗಿರುತ್ತದೆ ಇದರಿಂದ ಅಂದಾಜು ದೋಷಪೂರಿತ ಆಗಿರುವುದಿಲ್ಲ ಹಾಗೂ ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು ಯಾವುದೇ ಮೊತ್ತವು ನಷ್ಟವಾಗಿರುವುದಿಲ್ಲ, ಇದರಿಂದ ಯಾವುದೇ ಅಧಿಕಾರಿಗಳನ್ನು ಅಮಾನತು ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಲೋಇ 37 ಸಿಕ್ಯೂಎನ್ 2024(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು

LCQ no: 278 ಅನುಬಂಧ-1 Annexure - 3

ಅನುಬಂಧ-1 (4)

# INDIA NON JUDICIAL

## Government of Karnataka

### e-Stamp

सत्यमेव जयते

| | | |
|---|---|---|
| Certificate No. | : | IN-KA29026524O500070 |
| Certificate Issued Date | : | 06-Apr-2016 12:20 PM |
| Account Reference | : | NONACC (FI)/ kabacsl08/ BANGALORE/ KA-BA |
| Unique Doc. Reference | : | SUBIN-KAKABACSL08074901148821700 |
| Purchased by | : | M M RAMASWAMY |
| Description of Document | : | Article 12 Bond |
| Description | : | CONSENT AGREEMENT |
| Consideration Price (Rs.) | : | 0 (Zero) |
| First Party | : | M M RAMASWAMY |
| Second Party | : | THASILDHAR HOSAKOTE |
| Stamp Duty Paid By | : | M M RAMASWAMY |
| Stamp Duty Amount(Rs.) | : | 100 (One Hundred only) |

Authorised Signatory
For The Bangalore Advocates'
Co-operative Society Ltd

13-4-16

Please write or type below this line

ಒಪ್ಪಿಗೆ ಕರಾರು ಪತ್ರ

ರವರಿಗೆ,

ತಹಶೀಲ್ದಾರ್ ರವರಿಗೆ
ಹೊಸಕೋಟೆ ತಾಲ್ಲೂಕು, ಹೊಸಕೋಟೆ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.
ಇಂದ,
ಎಂ.ಎಂ. ರಾಮಸ್ವಾಮಿ ಬಿನ್ ಲೇಟ್ ಮುನಿಯಪ್ಪ, ರಾಮಸ್ವಾಮಿಪಾಳ್ಯ.

1

Statutory Alert:

1. The authenticity of this Stamp Certificate should be verified at [illegible]
available on the website renders it invalid.

ನಾಗನಾಯಕನಕೋಟೆ ದಾಖಲೆ ಗ್ರಾಮ, ಅನುಗೊಂಡನಹಳ್ಳಿ ಹೋಬಳಿ,
ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ.

(3)

ಮಾನ್ಯರೆ,

ವಿಷಯ : ನಿಮ್ಮ ಪತ್ರವಾದ, ದಿನಾಂಕ : 31-03-2016, ಕ್ರಮ ಸಂಖ್ಯೆ : ಎಲ್.ಎನ್.ಡಿ. ಎಸ್.ಆರ್. 508/2015-16 ಕ್ಕೆ ಉತ್ತರ.

ಅನುಗೊಂಡನನಹಳ್ಳಿ ಹೋಬಳಿ, ಹಾರೋಹಳ್ಳಿ ಗ್ರಾಮದ ಸರ್ವೆ ನಂ. 87 ರ ಪೈಕಿ, ವಿಸ್ತೀರ್ಣ 1 ಎಕರೆ 32.08 ಗುಂಟೆ ಜಮೀನು , ನನ್ನ ಸ್ವಾಧೀನಾನುಭವದಲ್ಲಿರುವ, ಕಂದಾಯ ದಾಖಲಾತಿಗಳು ನನ್ನ ಹೆಸರಿನಲ್ಲಿರುವ, ನನ್ನ ಹಕ್ಕುಭಾದ್ಯತೆಗೆ ಒಳಪಡುವ ನನ್ನ ಜಮೀನನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋ.ಬಂ.ಮತ್ತು ಒ.ಜ.ಇಲಾಖೆಯವರು ತಮಗೆ ಪತ್ರದ ಸಂಖ್ಯೆ : ಹಾರೋಹಳ್ಳಿ ಸೇತುವೆ 1440/2015-16, ದಿನಾಂಕ : 27-11-2015 ರಂತೆ ನನ್ನ ಜಮೀನು, ಹಾರೋಹಳ್ಳಿ ಸೇತುವೆ ನಿರ್ಮಿಸಲು ಅವಶ್ಯಕತೆ ಇರುವುದರಿಂದ, ಸದರಿ ನನ್ನ ಜಮೀನಿಗೆ ಪರ್ಯಾಯವಾಗಿ ಸದರಿ ಹಾರೋಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 85 ರಲ್ಲಿ ವಿಸ್ತೀರ್ಣ 1 ಎಕರೆ 32.08 ಗುಂಟೆ ಜಮೀನನ್ನು ನನಗೆ ಮಂಜೂರು ಮಾಡುವಂತೆ ಸರ್ಕಾರವನ್ನು ಕೋರಲು ಉದ್ದೇಶಿಸಿರುವುದು, ಅಂದರೆ ನನ್ನ ಜಮೀನಾದ ಸದರಿ ಹಾರೋಹಳ್ಳಿ ಗ್ರಾಮದ, ಸರ್ವೆ ನಂ.87 ರಲ್ಲಿ 1 ಎಕರೆ 32.08 ಗುಂಟೆ ಜಮೀನನ್ನು ದಕ್ಷಿಣ ಪಿನಾಕಿನಿ ನದಿಗೆ ಸೇತುವೆ ನಿರ್ಮಿಸಲು ತೆಗೆದುಕೊಳ್ಳುವ ಜಮೀನಿಗೆ ಬದಲಾಗಿ, ಸದರಿ ಹಾರೋಹಳ್ಳಿ ಗ್ರಾಮದ ಸರ್ವೆ ನಂ. 85 ರಲ್ಲಿ ವಿಸ್ತೀರ್ಣ 1 ಎಕರೆ 32.08 ಗುಂಟೆ ಜಮೀನನ್ನು ಅದಲು-ಬದಲಾಗಿ ಮಂಜೂರು ಮಾಡಲು ಸರ್ಕಾರವನ್ನು ಕೋರಲು ಉದ್ದೇಶಿಸಿರುವ ನಿಮ್ಮ ತೀರ್ಮಾನಕ್ಕೆ ನನ್ನ ಒಪ್ಪಿಗೆ ಇದೆ ಎಂದು ಹೇಳಲು ಈ ಮೂಲಕ ಇಚ್ಚಿಸುತ್ತೇನೆ. ಆದರೆ ಯಾವುದೇ ಕಾರಣ ತೋರಿಸಿ, ನನಗೆ ಸದರಿ ಜಮೀನನ್ನು ಮಂಜೂರು ಮಾಡಿಕೊಡದೇ ಇದ್ದಪಕ್ಷದಲ್ಲಿ, ನನ್ನ ಸದರಿ ಜಮೀನನ್ನು ಸೇತುವೆ ನಿರ್ಮಾಣಕ್ಕೆ ಬಿಟ್ಟುಕೊಡಲು ಸಾಧ್ಯವಿಲ್ಲವೆಂದು ಈ ಮೂಲಕ ತಿಳಿಸುತ್ತೇನೆ. ಈ ವಿಚಾರದಲ್ಲಿ ಇನ್ನು ಮುಂದೆ ಯಾವುದೇ ತಂಟೆ, ತಕರಾರುಗಳು ಬಂದಲ್ಲಿ ನನಗೆ ಆಗತಕ್ಕ ಕಷ್ಟ ನಷ್ಟಗಳಿಗೆ ನಿಮ್ಮದೆ ಜವಾಬ್ದಾರಿಯಾಗಿರುತ್ತದೆ ಎಂದು ಹೇಳಲು ಇಚ್ಚಿಸುತ್ತೇನೆ.

ಆದ್ದರಿಂದ ಸರ್ಕಾರದಿಂದ ಕಾನೂನು ಬದ್ಧವಾಗಿ ನನಗೆ ಸದರಿ ಜಮೀನಾದ, ಸರ್ವೆ ನಂ. 85 ರಲ್ಲಿ 1 ಎಕರೆ 32.08 ಗುಂಟೆ ಜಮೀನಿಗೆ ಗಡಿ ಗುರ್ತುಗಳನ್ನು ಗುರುತಿಸಿ, ಯಾವುದೇ ರೀತಿಯ ತಂಟೆ, ತಕರಾರುಗಳು ಇಲ್ಲದೇ ನನಗೆ ಸ್ವಾದೀನವನ್ನು ಕೊಟ್ಟು ಕಾನೂನಿನಂತೆ ಮಂಜೂರು ಮಾಡಿದ ನಂತರ, ನನ್ನ ಸದರಿ ಜಮೀನಾದ ಸರ್ವೆ ನಂ. 87 ರಲ್ಲಿ ವಿಸ್ತೀರ್ಣ 1 ಎಕರೆ 32.08 ಗುಂಟೆ ಜಮೀನನ್ನು ಸೇತುವೆಗೆ ಬಿಟ್ಟು ಕೊಡುವುದಾಗಿ ಈ ಮೂಲಕ ಒಪ್ಪಿರುತ್ತೇನೆ.

ಸ್ಥಳ : ನಾಗನಾಯಕನಕೋಟೆ
ದಿನಾಂಕ : 13/04/2016

Hanumaiah

ಒಪ್ಪಿಗೆ ಕರಾರು ಪತ್ರ ಬರೆದು ಕೊಟ್ಟವರ ಸಹಿ

ಅನುಬಂಧ-2

ಅನುಬಂಧ-2

(7)

Annexure - H

ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

**ಉಪ ತಹಶೀಲ್ದಾರ್‌ರವರ ಕಾರ್ಯಾಲಯ, ಅನುಗೊಂಡನಹಳ್ಳಿ ಹೋಬಳಿ, ಹೊಸಕೋಟೆ ತಾಲ್ಲೂಕು.**

ನಂ.ಉಪತನು.ಎಲ್‌ಎನ್‌ಡಿ:ಸಿಆರ್:47/16-17

ದಿನಾಂಕ:12-01-2017.

ರವರಿಗೆ,

ತಹಶೀಲ್ದಾರ್
ಹೊಸಕೋಟೆ ತಾಲ್ಲೂಕು
ಹೊಸಕೋಟೆ.

ಮಾನ್ಯರೇ,

ವಿಷಯ:--ಹೊಸಕೋಟೆ ತಾಲ್ಲೂಕು ಅನುಗೊಂಡನಹಳ್ಳಿ ಹೋಬಳಿ ಹಾರೋಹಳ್ಳಿ ಗ್ರಾಮದ ದಕ್ಷಿಣ ಪಿನಾಕಿನಿ ನದಿಗೆ ಅಡ್ಡಲಾಗಿ ನಿರ್ಮಿಸಲಿರುವ ರಸ್ತೆ ಮತ್ತು ಸೇತುವೆಗೆ ಅವಶ್ಯಕವಿರುವ 1-32½ಗುಂಟೆ ಖಾಸಗಿ ಜಮೀನಿಗೆ ಪರ್ಯಾಯವಾಗಿ ಬದಲಿ ಸರ್ಕಾರಿ ಜಮೀನನ್ನು ಮಂಜೂರಿ ಮಾಡುವ ಬಗ್ಗೆ.

13/1/17

1319

ಉಲ್ಲೇಖ:-1.ಸಹಾಯಕ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಬಂದರು ಒಳನಾಡು ಜಲ ಇಲಾಖೆ ಹೊಸಕೋಟೆ ಉಪವಿಭಾಗ ಹೊಸಕೋಟೆ ರವರ ಪತ್ರದ ಸಂಖ್ಯೆ:ಹಾರೋಹಳ್ಳಿ ಸೇತುವೆ440/2015-16 ದಿನಾಂಕ:27-11-2015.
2.ರಾಜಸ್ವ ನಿರೀಕ್ಷಕರು ಅನುಗೊಂಡನಹಳ್ಳಿ ಹೋಬಳಿ ರವರ ಪತ್ರದ ಸಂಖ್ಯೆ: ರಾ.ನಿ.ಪಿ.ಆರ್- 560/2016-17 ದಿನಾಂಕ:12-01-2017.
3.ಈ ಕಛೇರಿ ಪತ್ರದ ಸಂಖ್ಯೆ: ಎಲ್‌ಎನ್‌ಡಿ:ಸಿಆರ್.53/2015-16 ದಿನಾಂಕ:26-05-2016.

...ಕಛೇರಿ, ಹೊಸಕೋಟೆ

***********

ಹೊಸಕೋಟೆ ತಾಲ್ಲೂಕು ಅನುಗೊಂಡನಹಳ್ಳಿ ಹೋಬಳಿಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 207 ರಿಂದ ಬೆಂಗಳೂರು ನಗರ ಜಿಲ್ಲೆಯಲ್ಲಿ ಹಾದು ಹೋಗುವ ರಾಜ್ಯ ಹೆದ್ದಾರಿ ಸಂಖ್ಯೆ 35ನ್ನು ಸಂಪರ್ಕಿಸುವ ರಸ್ತೆ ನಿರ್ಮಿಸಲು ಹಾರೋಹಳ್ಳಿ ಗ್ರಾಮದ ಬಳಿ ದಕ್ಷಿಣ ಪಿನಾಕಿನಿ ನದಿಗೆ ಅಡ್ಡಲಾಗಿ ರಸ್ತೆ ಮತ್ತು ಸೇತುವೆಯನ್ನು ನಿರ್ಮಿಸಬೇಕಾಗಿದ್ದು ಇದಕ್ಕೆ ಹಾರೋಹಳ್ಳೀ ಗ್ರಾಮದ ಸ.ನಂ.87ರ 1-32½ಗುಂಟೆ ಖಾಸಗಿ ಜಮೀನು ಅವಶ್ಯಕತೆ ಇದ್ದು ಇದಕ್ಕೆ ಪರ್ಯಾಯವಾಗಿ ಸರ್ಕಾರಿ ಜಮೀನು ಮಂಜೂರು ಮಾಡಲು ಸೂಚಿಸಿರುವುದರ ಮೇರೆಗೆ ಉಲ್ಲೇಖ(3)ರ ಪತ್ರದಂತೆ ವಿವರವಾದ ವರದಿಯನ್ನು ಕಡತದೊಂದಿಗೆ ಸಲ್ಲಿಸಲಾಗಿದ್ದು. ಸದರಿ ಜಮೀನು ಮಂಜೂರು ಮಾಡಲು ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಇರುವುದಾಗಿ ಅದರ ಬದಲು ಬೇರೊಂದು ಸರ್ಕಾರಿ ಜಮೀನನ್ನು ಮಂಜೂರಿ ಮಾಡಲು ಪ್ರಸ್ತಾವನೆ ಸಲ್ಲಿಸಲು ಮಾನ್ಯ ಉಪವಿಭಾಗಾಧಿಕಾರಿಗಳು, ದೊಡ್ಡಬಳ್ಳಾಪುರ ಉಪವಿಭಾಗರವರು ಮೌಖಿಕವಾಗಿ ಸೂಚಿಸಿರುವುದರ ಮೇರೆಗೆ ಪರಿಶೀಲಿಸಿ ಈ ಎರಡನೇಯ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಬೋಧನಹೊಸಹಳ್ಳಿ ಗ್ರಾಮದ ಸ.ನಂ.128ರಲ್ಲಿ ಒಟ್ಟು 2-37ಗುಂಟೆ ಜಮೀನಿದ್ದು ಇದ್ದು ಸರ್ಕಾರಿ ಗೋಮಾಳ ಎಂದು ವರ್ಗೀಕೃತವಾಗಿರುತ್ತದೆ. ಈ ಜಮೀನಿನ ಪೈಕಿ 1-32½ಗುಂಟೆ ಜಮೀನನ್ನು ಮೇಲ್ಕಂಡ ಹಾರೋಹಳ್ಳಿ ಗ್ರಾಮದ ಸ.ನಂ.87ರ ಪೈಕಿ 1-32½ ಗುಂಟೆ ಜಮೀನಿಗೆ

ಪರ್ಯಾಯವಾಗಿ ಮಂಜೂರಿ ಮಾಡಬಹುದಾಗಿರುತ್ತದೆ. ಈ ಜಮೀನಿನ ಬಾಜು ರೈತರು ಇಪ್ಪ ಹಾಗೆಯೇ ಈ ಸ.ನಂ.128ರ ಒತ್ತುವರಿ ಮಾಡಿದ್ದು, ದುರಸ್ಥಿ ಕಾಲದಲ್ಲಿ ಅವರನ್ನು ಹೊರದುಡಬಹುದಾಗಿರುತ್ತದೆ. ಒಂದು ಮೊಗಲಲ್ಲಿ ಒಂದು-ಖಾಸಗಿ ಮನೆ-ನಿರ್ಮಾಣವಾಗಿದ್ದು ಅವರು 94ಸಿಸಿ ಅಡಿ ಅರ್ಜಿ ಸಲ್ಲಿಸಿರುವುದು ಕಂಡು ಬರುತ್ತದೆ. ಇದನ್ನು ನಿಯಮಾನುಸಾರ ಪರಿಶೀಲಿಸಿ ಕ್ರಮ ವಹಿಸಲಾಗುವುದು. ಈ ಮನೆಗೆ ಜಮೀನನ್ನು ಉಳಿಯು ಜಮೀನು ಮಂಜೂರು ಮಾಡಲು ಅಗತ್ಯವಾಗಿರುವಷ್ಟು ಇದ್ದು ಯಾವುದೇ ಸಮಸ್ಯೆಯಾಗಿರುವುದಿಲ್ಲ.

ಹಾರೋಹಳ್ಳಿ ಗ್ರಾಮದ ಸ.ನಂ.87ರ ಜಮೀನಿನ ಖಾತೆಯು ರಾಮಸ್ವಾಮಿ ಬಿನ್ ಮುನಿಯಪ್ಪ ಎಂಬುವರ ಹೆಸರಿಗೆ ಇದ್ದು ಈ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ರಿವಿಷನ್ ಪಿಟಿಷನ್/8/2005-06 ದಿನಾಂಕ:04-05-2005ರಂತೆ ಪ್ರಕರಣ ನಡೆಯುತ್ತಿದ್ದು ತಡೆಯಾಜ್ಞೆ ಇರುತ್ತದೆ. ಮುಂದೆ ಈ ಪ್ರಕರಣದ ವಾದಿ ಮತ್ತು ಪ್ರತಿವಾದಿಗಳಿಗೆ ಸಂಬಂಧಿಸಿದಂತೆ ಯಾರ ಪರ ಆದೇಶವಾಗುವುದೊ ಅವರಿಗೆ ಪರ್ಯಾಯವಾಗಿ ಮಂಜೂರು ಮಾಡಲು ಉದ್ದೇಶಿಸಿರುವ ಜಮೀನನ್ನು ಮಂಜೂರಿ ಮಾಡುವ ಷರತ್ತಿಗೆ ಒಳಪಡಿಸಿ ಮಂಜೂರಿ ಮಾಡಬಹುದಾಗಿದೆ.

ಆದ್ದರಿಂದ ಹೊಸಕೋಟೆ ತಾಲ್ಲೂಕು ಅನುಗೊಂಡನಹಳ್ಳಿ ಹೋಬಳಿ ಹಾರೋಹಳ್ಳಿ ಗ್ರಾಮದ ಸ.ನಂ.87ರ 1-32½ ಗುಂಟೆ ಖಾಸಗಿ ಜಮೀನಿಗೆ ಪರ್ಯಾಯವಾಗಿ ಬೋಧನಹೊಸಹಳ್ಳಿ ಗ್ರಾಮದ ಸ.ನಂ.128ರ ಪೈಕಿ 1-32½ ಗುಂಟೆ ಜಮೀನನ್ನು ಮಂಜೂರಿ ಮಾಡಬಹುದೆಂದು ಕೋರಿ ಈ ಸಂಬಂಧ ವಿಶಿಷ್ಟ ಕಡತವನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ. [illegible]
[illegible]

ತಮ್ಮ ನಂಬುಗೆಯ

ಉಪತಹಶೀಲ್ದಾರ್
ಅನುಗೊಂಡನಹಳ್ಳಿ ಹೋಬಳಿ